**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ವರ್ಗ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ ಸಿ ನಂ. 732/2023**

ಫಿರ್ಯಾದುದಾರರು     ಸರ್ಕಾರದ ಪರವಾಗಿ ಗುಂಡ್ಲುಪೇಟೆ ಪೋ. ಠಾಣೆ

ವಿರುದ್ಧ

ಆರೋಪಿ     ಲೋಕೇಶ್ ಬಿನ್ ಬೊಮ್ಮ, 25 ವರ್ಷ,<br>ವಾಸಃ ಮದ್ದೂರು ಕಾಲೋನಿ,<br>ಗುಂಡ್ಲುಪೇಟೆ ತಾಲ್ಲೂಕು.

## ದೋಷಾರೋಪಣೆ

ಶ್ರೀ ಬಸವರಾಜ ತಳವಾರ. ಬಿ.ಎ., ಎಲ್ ಎಲ್ ಬಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಗುಂಡ್ಲುಪೇಟೆ ಆದ ನಾನು ಆರೋಪಿಯಾದ ನಿಮ್ಮನ್ನು ಈ ಕೆಳಕಂಡ ಆಪಾದನೆಗಳಿಗೆ ಗುರಿಪಡಿಸುತ್ತೇನೆ.

ದಿಃ 27.09.2023 ರಂದು ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ಗುಂಡ್ಲುಪೇಟೆ ಪೊಲೀಸ್ ಠಾಣಾ ಸರಹದ್ದು ಮದ್ದೂರು ಕಾಲೋನಿ ಗ್ರಾಮದ ಪಿರ್ಯಾದಿಯವರ ಮನೆ ಮುಂದೆ ಇರುವ ಜಾವಡಿಯಲ್ಲಿ ಚಾಸಾ-1 ರಾಜು ರವರು ಮಲಗಿದ್ದಾಗ, ಅಲ್ಲಿಗೆ ಬಂದ ಆರೋಪಿಯಾದ ನೀವು ಚಾಸಾ-1 ರಾಜು ರವರೊಂದಿಗೆ ಹಳೆಯ ದ್ವೇಷದಿಂದ ತೀಟೆ ಜಗಳ ತೆಗೆದು ಬೋಳಿಮಗನೆ, ಸೂಳೇ ಮಗನೆ ಇಲ್ಲಿ ಯಾಕೆ ಮಲಗಿದ್ದೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿರುತ್ತೀರೆಂದು ಆ ಮೂಲಕ ಭಾ ದಂ ಸಂ ಕಲಂ **504** ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-1 ರವರ ಜೊತೆ ತೀಟೆ ಜಗಳ ತೆಗೆದು ಗಲಾಟೆ ಮಾಡಿ ಅಲ್ಲೆ ಇದ್ದ ಒಂದು ಕಲ್ಲಿನಿಂದ ಚಾಸಾ-1 ರವರ ಬಲಕಣ್ಣಿನ ಬಳಿ ಹೊಡೆದು ರಕ್ತಗಾಯಪಡಿಸಿರುತ್ತೀರೆಂದು ಹಾಗೂ ಚಾಸಾ-1 ರಾಜು ರವರು ನೋವಿನಿಂದ ಕಿರುಚಿಕೊಂಡಾಗ ಚಾಸಾ-1 ರಾಜು ರವರ ತಾಯಿ ಚಾಸಾ-2 ದೇವಮ್ಮ ರವರು ಆರೋಪಿಯಾದ ನಿಮ್ಮನ್ನು ಏಕೆ ಹೊಡೆಯುತ್ತಿದ್ದೀಯಾ ಎಂದು ಕೇಳಿದ್ದಕ್ಕೆ ಚಾಸಾ-2 ದೇವಮ್ಮ ರವರಿಗೂ ಸಹ ಆರೋಪಿಯಾದ ನೀವು ಕಲ್ಲಿನಿಂದ ಅವರ ಮೈಕೈಗೆ ಮತ್ತು ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರೆಂದು ಆ ಮೂಲಕ ಭಾ ದಂ ಸಂ ಕಲಂ **324** ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಮೇಲ್ಕಂಡ  ಅಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾದೊಳಗೆ  ಎಸಗಿರುವುದಾಗಿ ಈ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ  ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ

ಗುಂಡ್ಲುಪೇಟೆ